# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೬–ಸಿ<br>**Part – VI C** | ಮೈಸೂರು, ಶುಕ್ರವಾರ, ೨೦, ಫೆಬ್ರವರಿ, ೨೦೨೬ (ಫಾಲ್ಗುಣ, ೦೧, ಶಕವರ್ಷ, ೧೯೪೭)<br>**MYSURU**, **FRIDAY, 20,** FEBRUARY, 2026 (PHALGUNA , 01, SHAKAVARSHA, 1947) | ನಂ. ೦೫<br>**No. 05** |
|---|---|---|



**ಜಿಲ್ಲಾಧಿಕಾರಿಗಳ ಹಾಗೂ**
**ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ**
**ಕೊಡಗು ಜಿಲ್ಲೆ, ಮಡಿಕೇರಿ–571201**

**ಕಛೇರಿ: 08272–225500**
**ನಿವಾಸ: 08272–225700**
**ಫ್ಯಾಕ್ಸ್: 08272–225900**
**ಈ–ಮೇಲ್:dckodagu@mail.kar.nic.in**
**ವೆಬ್ ಸೈಟ್:** http://www.kodagu.nic.in


---

ಸಂ/ಚುನಾ/(ಪು.ಕು)/31/2025–26 ದಿನಾಂಕ:20–02–2026

## ಅಧಿಸೂಚನೆ

**ವಿಷಯ:–** ಕೊಡಗು ಜಿಲ್ಲೆಯ ಕುಶಾಲನಗರ ಪುರಸಭೆಯ ವಾರ್ಡ್‌ಗಳನ್ನು 2011ರ ಜನಗಣತಿಯ ಆಧಾರದ ಮೇರೆ ಪುನರ್ ವಿಂಗಡಣೆ ಮಾಡುವ ಕುರಿತು.

**ಉಲ್ಲೇಖ:–**

1. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/221/ಎಂಎಲ್‌ಆರ್/2021(ಇ) ದಿನಾಂಕ:08–12–2022.
2. ಸರ್ಕಾರದ ಆದೇಶ ಸಂ:ಯುಡಿಡಿ/4/ಎಂಎಲ್‌ಆರ್/2014 ಬೆಂಗಳೂರು ದಿನಾಂಕ:15–02–2014.
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ ಕೊಡಗು ಜಿಲ್ಲೆ, ಮಡಿಕೇರಿ ಇವರ ಪತ್ರ ಸಂಖ್ಯೆ:ಡಿಯುಡಿಸಿ/ 364/2017–18 ದಿನಾಂಕ:19–08–2024.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ/104/ಟಿಎಂಎಸ್/2014 ದಿನಾಂಕ:09–01–20215.
5. ಈ ಕಚೇರಿ ಕರಡು ಅಧಿಸೂಚನೆ ಪತ್ರ ಸಮ ಸಂಖ್ಯೆ ದಿನಾಂಕ:18–08–2025.

******

ಉಲ್ಲೇಖ(1)ರ ಅಧಿಸೂಚನೆಯಲ್ಲಿ ಕೊಡಗು ಜಿಲ್ಲೆಯ ಕುಶಾಲನಗರ ಪಟ್ಟಣ ಪಂಚಾಯಿತಿಗೆ ಮುಳ್ಳುಸೋಗೆ ಗ್ರಾಮ ಪಂಚಾಯಿತಿ ಪೂರ್ಣ ಕಂದಾಯ ಗ್ರಾಮ ಹಾಗೂ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿಯ ಮಾದಾಪಟ್ಟಣ ಗ್ರಾಮದ ಭಾಗಶಃ ಪ್ರದೇಶಗಳನ್ನು ಸೇರಿಸಿಕೊಂಡು ಕುಶಾಲನಗರ ಪುರಸಭೆಯನ್ನಾಗಿ ಮೇಲ್ದರ್ಜೆಗೆರಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಸಂಬಂಧ ಉಲ್ಲೇಖ(1)ರ ಅಧಿಸೂಚನೆಯನ್ನು ಮತ್ತು ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್ ಪುನರ್ ವಿಂಗಡಣೆ ಮಾಡುವ ಬಗ್ಗೆ ಹೊರಡಿಸಿರುವ ಮಾರ್ಗಸೂಚಿಯನ್ನು ಅನುಸರಿಸಿ ಉಲ್ಲೇಖ(3)ರ ಯೋಜನಾ

ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಡಗು ಜಿಲ್ಲೆ, ಮಡಿಕೇರಿ ಇವರು ಕುಶಾಲನಗರ ಪುರಸಭೆಯ ವಾರ್ಡ್‌ಗಳನ್ನು 2011ರ ಜನಗಣತಿಯ ಆಧಾರದ ಮೇರೆ ಪುನರ್ ವಿಂಗಡಣೆ ಮಾಡಲು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಕರ್ನಾಟಕ ಪೌರಸಭೆಗಳ ಅಧಿನಿಯಮ–1964ರ ಪ್ರಕರಣ 13ರ ಮೇರೆಗೆ ಕುಶಾಲನಗರ ಪುರಸಭೆಯ ವಾರ್ಡ್‌ಗಳನ್ನು 2011ರ ಜನಗಣತಿಯನ್ನು ಆಧಾರಿಸಿ ಪುನರ್ ವಿಂಗಡಣೆ ಮಾಡಿ, ವಾರ್ಡಿನ ಹೆಸರು ಹಾಗೂ ವಾರ್ಡಿನ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ವಿವರವಾಗಿ ನಮೂದಿಸಿ ಉಲ್ಲೇಖ(5)ರಂತೆ ಕರಡು ಅಧಿಸೂಚನೆ ಹೊರಡಿಸಿ, ಈ ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆಕ್ಷೇಪಣೆಯನ್ನು/ಸಲಹೆಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅವಧಿಯಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆಯನ್ನು/ಸಲಹೆಗಳನ್ನು ಪರಿಗಣಿಸಿರುವುದರಿಂದ;

ಕರ್ನಾಟಕ ಪೌರಸಭೆಗಳ ಅಧಿನಿಯಮ–1964ರ ಪ್ರಕರಣ 13ರ ಮೇರೆಗೆ ಕುಶಾಲನಗರ ಪುರಸಭೆಯ ವಾರ್ಡ್‌ಗಳನ್ನು 2011ರ ಜನಗಣತಿಯನ್ನು ಆಧಾರಿಸಿ ಈ ಕೆಳಕಂಡಂತೆ ಪುನರ್ ವಿಂಗಡಣೆ ಮಾಡಿ, ವಾರ್ಡಿನ ಹೆಸರು ಹಾಗೂ ವಾರ್ಡಿನ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ವಿವರವಾಗಿ ನಮೂದಿಸಿ ಅಧಿಸೂಚನೆ ಹೊರಡಿಸಿದೆ.

## ವಾರ್ಡ್‌ಗಳ ವಿವರ

1. ನಗರ ಸ್ಥಳೀಯ ಸಂಸ್ಥೆಯ ಹೆಸರು : **ಪುರಸಭೆ, ಕುಶಾಲನಗರ**
2. ವಾರ್ಡ್‌ಗಳ ಸಂಖ್ಯೆ : **23**

## ಕುಶಾಲನಗರ ಪುರಸಭಾ ವ್ಯಾಪ್ತಿಯ ವಾರ್ಡ್‌ಗಳ ವಿವರ ಮತ್ತು ಚೆಕ್ಕುಬಂದಿ ವಿವರ

| ಕ್ರ. ಸಂ. | ವಾರ್ಡ್‌ನ ಹೆಸರು ಮತ್ತು ಸಂಖ್ಯೆ | ವಾರ್ಡ್‌ನ ಪ್ರದೇಶ ವ್ಯಾಪ್ತಿ (ಚೆಕ್ಕುಬಂದಿ) |
|---|---|---|
| 1 | **ವಾರ್ಡ್ ಸಂಖ್ಯೆ –1**<br>1. ರಸೂಲ್ ಬಡಾವಣೆ,<br>2. ವಿವೇಕಾನಂದ ಬಡಾವಣೆ<br>3. ತ್ಯಾಗರಾಜ ರಸ್ತೆ ಬಲಬದಿ,<br>4. ಕೆಂಪಮ್ಮ ಬಡಾವಣೆ,<br>5. ಆದಿಶಂಕರಾಚಾರ್ಯ ಬಡಾವಣೆ ಭಾಗಶಃ | ಕಾವೇರಿ ನದಿ ಸೇತುವೆಯಿಂದ ಪ್ರಾರಂಭವಾಗಿ, ಉತ್ತಾರಾಭಿಮುಖ ವಾಗಿ ಬಿ.ಎಂ ರಸ್ತೆಯಲ್ಲಿ ಸಾಗಿ, ತ್ಯಾಗರಾಜ ರಸ್ತೆಗೆ ಬಂದು ತಲುಪಿ, ತದನಂತರ ಬಲಕ್ಕೆ ತಿರುಗಿ, ಥಿಯೇಟರ್ ರಾಜಣ್ಣ ರವರ ಮನೆಯಿಂದ ಪೂರ್ವಾಭಿಮುಖವಾಗಿ ಮುಂದೆ ಸಾಗಿ ರುದ್ರ ಭೂಮಿ, ಮಾರುಕಟ್ಟೆ ಒಳಗೊಂಡು ಬಿ.ಸಿ.ಮುರಳೀಧರ್‌ರವರ ವಾಸದ ಮನೆ ತಲುಪಿ, ತದನಂತರ ಬಲಕ್ಕೆ ತಿರುಗಿ ಪೂರ್ವಾಭಿ ಮುಖವಾಗಿ ಚಲಿಸಿ ಕಾವೇರಿ ಹೊಳೆಗೆ ತಲುಪುತ್ತದೆ.<br>**ಉತ್ತರ : ಆದಿಶಂಕರಾಚಾರ್ಯ ಬಡಾವಣೆ ಭಾಗಶ;**<br>**ಪೂರ್ವ : ಕಾವೇರಿ ನದಿ**<br>**ಪಶ್ಚಿಮ : ತ್ಯಾಗರಾಜ ರಸ್ತೆ**<br>**ದಕ್ಷಿಣ : ಕಾವೇರಿ ನದಿ** |
| 2 | **ವಾರ್ಡ್ ಸಂಖ್ಯೆ –2**<br>1. ಕಾಳಮ್ಮ ಕಾಲೋನಿ<br>2. ಆದರ್ಶ ದ್ರಾವಿಡ ಕಾಲೋನಿ ಭಾಗಶಃ,<br>3. ನೇತಾಜಿ ಬಡಾವಣೆ ಭಾಗಶಃ | ಬಿ.ಎಂ.ರಸ್ತೆಯ ಕಾಳಮ್ಮ ಕಾಲೋನಿ ಜಂಕ್ಷನ್‌ನಿಂದ ಪ್ರಾರಂಭ ವಾಗಿ, ಉತ್ತರಾಭಿಮುಖವಾಗಿ ಸಾಗಿ, ಹಳೆ ಟಾಪ್–ಇನ್–ಟೌನ್ ಹೋಟೇಲ್ ತಲುಪಿ, ತದನಂತರ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸಿ ಚಂದ್ರಮಣಿ ಕೋಂ/ನಂಜಪ್ಪ ನವರ ಮನೆವರೆಗೆ ಮತ್ತು ಕಾಳಮ್ಮ ಕಾಲೋನಿಯ ಬಿ.ಎಂ.ರಸ್ತೆ ಜಂಕ್ಷನ್‌ನಿಂದ ಪೂರ್ವಾಭಿಮುಖವಾಗಿ ಸಾಗಿ, ಕೆ.ರವಿ ರವರ ವಾಣಿಜ್ಯ ಮಳಿಗೆ ತಲುಪಿ, ತದನಂತರ ಎಡಕ್ಕೆ ತಿರುಗಿ ಉತ್ತರಾಭಿ ಮುಖವಾಗಿ ಸಾಗಿ ನೇತಾಜಿ ಬಡಾವಣೆಗೆ ಸೇರುತ್ತದೆ.<br>**ಉತ್ತರ : ನೇತಾಜಿ ಬಡಾವಣೆ**<br>**ಪೂರ್ವ : ತ್ಯಾಗರಾಜ ರಸ್ತೆ**<br>**ಪಶ್ಚಿಮ : ಬಿ.ಎಂ.ರಸ್ತೆ**<br>**ದಕ್ಷಿಣ : ಬಿ.ಎಂ.ಮುಖ್ಯ ರಸ್ತೆ** |

| | | |
|---|---|---|
| 3 | **<u>ವಾರ್ಡ್ ಸಂಖ್ಯೆ –3</u>**<br>1. ಸಿಂಗಾರಮ್ಮ ಬಡಾವಣೆ<br>2. ಬದ್ರುನ್ನಿಸಾ ಬಡಾವಣೆ<br>3. ಶೇಲಜಾ ಬಡಾವಣೆ<br>4. ಬಿ.ಎಂ ರಸ್ತೆ<br>5. ನಾಗಪ್ಪಶೆಟ್ಟಿ ಬಡಾವಣೆ<br>6. ಬ್ರೆಡ್ಲಿ ಬಡಾವಣೆ<br>7. ನೇತಾಜಿ ಬಡಾವಣೆ ಭಾಗಶ:<br>8. ಕೆ.ಪಿ.ಟಿ.ಸಿ.ಎಲ್ ವಸತಿ ಗೃಹ<br>9. ಚಿಕ್ಕಣ್ಣ ಬಡಾವಣೆ<br>10. ಯೋಗೇಶ್ ಬಡಾವಣೆ<br>11. ಆದರ್ಶ ದ್ರಾವಿಡ ಕಾಲೋನಿ ಭಾಗಶಃ | ಬಿ.ಎಂ.ರಸ್ತೆ ಕಾವೇರಿ ಹೊಳೆ ಸೇತುವೆಯಿಂದ ಪ್ರಾರಂಭವಾಗಿ, ಉತ್ತರಾಭಿಮುಖವಾಗಿ ಹೊರಟು, ಮಹಾರಾಜ ಲಾಡ್ಜ್ ಮತ್ತು ಸಾಫಲ್ಯಲಾಡ್ಜ್ ಮುಖಾಂತರ ಹೊರಟು ಸಿಂಗಾರಮ್ಮ ಬಡಾವಣೆ ರಸ್ತೆಯ ಪಶ್ಚಿಮಾಭಿಮುಖವಾಗಿ ಸಾಗಿ, ಸಿಂಗಾರಮ್ಮ ಬಡಾವಣೆ ಒಳಗೊಂಡು ಕಾವೇರಿ ನದಿಯವರೆಗೆ ಮತ್ತು ಬಿ.ಎಂ ರಸ್ತೆ ಯಲ್ಲಿರುವ ಮೆಡಾಕ್ ಚರ್ಚ್ ಪಕ್ಕದಲ್ಲಿರುವ ಖಾಲಿ ಜಾಗದಿಂದ ಉತ್ತರಾಭಿಮುಖವಾಗಿ ಸಾಗಿ, ಮುನ್ಸಿಪಲ್ ವಸತಿ ಗೃಹ ಮತ್ತು ಎಸ್.ಬಿ.ಐ ಮಾರ್ಗವಾಗಿ ಹೊರಟು ಕುಮಾರ್ ಮೆಡಿಕಲ್ ನರ್ಸಿಂಗ್ ಹೋಮ್ ನಿಂದ ಬಲಕ್ಕೆ ತಿರುಗಿ ಸೆಂಟ್ ಸಭಾಸ್ಟಿನ್ ಚರ್ಚ್ ಸೇರಿ ನಂತರ ಉತ್ತರಾಭಿಮುಖವಾಗಿ ಚಲಿಸಿ ಸುರೇಶ್‌ರವರ ಮನೆಯಿಂದ ಉತ್ತರಾಭಿಮುಖವಾಗಿ ಹೊರಟು ದುರ್ಗಾ ಸೆರೆಮಿಕ್ಸ್ ಒಳಗೊಂಡಂತೆ ಪಿ.ಪೊನ್ನುರಾಜ್ ರವರ ಮನೆಯಿಂದ ಬಲಕ್ಕೆ ತಿರುಗಿ, ಪೂರ್ವಾಭಿಮುಖವಾಗಿ ಕೆ.ಇ.ಬಿ ಒಳಗೊಂಡಂತೆ ತ್ಯಾಗರಾಜ ರಸ್ತೆಯಿಂದ ದಕ್ಷಿಣಾಭಿಮುಖವಾಗಿ ಹೊರಟು ಆದರ್ಶ ದ್ರಾವಿಡ ಕಾಲೋನಿ ಮುರುಗೇಶ್‌ರವರ ಮನೆಯಿಂದ ಉತ್ತರಾಭಿಮುಖವಾಗಿ ಹೊರಟು ಚಿಕ್ಕಣ್ಣ ಬಡಾವಣೆ, ಯೋಗೇಶ್ ಬಡಾವಣೆ ಒಳಗೊಂಡು ಚಂದ್ರಶೇಖರ್ ಮನೆ ಯಿಂದ ಪಶ್ಚಿಮಾಭಿಮುಖವಾಗಿ ಸಾಗಿ ಮೆಡಾಕ್ ಚರ್ಚ್ ಪಕ್ಕ ದಲ್ಲಿರುವ ಖಾಲಿ ಜಾಗವನ್ನು ತಲುಪುತ್ತದೆ.<br>**ಉತ್ತರ: ಕೆ.ಇ.ಬಿ. ಇಲಾಖೆಯ ಕಟ್ಟಡ ಮತ್ತು ಜಿ.ಎಂ.ಪಿ.ಶಾಲೆಯ ಹಿಂದಿನ ರಸ್ತೆ**<br>**ಪೂರ್ವ: ಕಾವೇರಿ ನದಿ**<br>**ಪಶ್ಚಿಮ: ತ್ಯಾಗರಾಜ ರಸ್ತೆ, ಬಿ ಎಂ ರಸ್ತೆ**<br>**ದಕ್ಷಿಣ: ಕಾವೇರಿ ನದಿ** |

| | | |
|---|---|---|
| 4 | **<u>ವಾರ್ಡ್ ಸಂಖ್ಯೆ –4</u>**<br>1. ದಂಡಿನಪೇಟೆ<br>2. ಹವಾಬಿ ಬಡಾವಣೆ<br>3. ಶಾಂತಿ ಮಾರ್ಗ<br>4. ಬಿ. ಎಂ ರಸ್ತೆ ಎಡಬದಿ | ಬಿ.ಎಂ.ರಸ್ತೆಯಲ್ಲಿರುವ ಹೀರೋ ಹೋಂಡಾ ಶೋ ರೂಂ ನಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಹೊರಟು ಸುಶೀಲಾ ರವರ ಮನೆವರೆಗೆ ಮತ್ತು ಅವರ ಮನೆಯ ಪಕ್ಕದಲ್ಲಿರುವ ರಸ್ತೆಯಲ್ಲಿ ತಿರುಗಿ ಪಶ್ಚಿಮಾಭಿಮುಖವಾಗಿ ಹೊರಟು ಎಂ. ಡಬ್ಲ್ಯೂ ಭಾಸ್ಕರ್ ರವರ ಮನೆಯನ್ನು ಒಳಗೊಂಡಂತೆ ಕಾವೇರಿ ನದಿಯವರೆಗೆ ಮತ್ತು ಅಯ್ಯಪ್ಪ ಸ್ವಾಮಿ ದೇವಸ್ಥಾನದಿಂದ ಉತ್ತರಾಭಿಮುಖವಾಗಿ ಹೊರಟು ಮತೀನ್‌ರವರ ಮನೆಯಿಂದ ಬಲಕ್ಕೆ ತಿರುಗಿ ದಂಡಿನಪೇಟೆ ಮುಖ್ಯ ರಸ್ತೆಯಿಂದ ಪೂರ್ವಾಭಿ ಮುಖವಾಗಿ ಸಾಗಿ ಬಿ.ಎಂ ರಸ್ತೆಗೆ ಸೇರುತ್ತದೆ.<br>**ಉತ್ತರ : ದಂಡಿನ ಪೇಟೆಯ ಮುಖ್ಯ ರಸ್ತೆ**<br>**ಪೂರ್ವ : ಬಿ.ಎಂ.ರಸ್ತೆ**<br>**ಪಶ್ಚಿಮ : ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ**<br>**ದಕ್ಷಿಣ : ಸಿಂಗಾರಮ್ಮ ಬಡಾವಣೆ** |
| 5 | **<u>ವಾರ್ಡ್ ಸಂಖ್ಯೆ–5</u>**<br>1. ಬಾಪೂಜಿ ಬಡಾವಣೆ<br>2. ಟೌನ್ ಕಾಲೋನಿ<br>3. ರಥಬೀದಿ ಬಲ ಪಾರ್ಶ್ವ<br>4. ಬಿ.ಎಂ.ರಸ್ತೆ | ಬಿ.ಎಂ.ರಸ್ತೆಯಲ್ಲಿರುವ ಜಿ.ಎಂ.ಪಿ.ಶಾಲೆಯಿಂದ ಪ್ರಾರಂಭ ವಾಗಿ ಬಿ.ಎಂ.ರಸ್ತೆಯಲ್ಲಿ ಉತ್ತರಾಭಿಮುಖವಾಗಿ ಚಲಿಸಿ ಆಕ್ಸಿಸ್ ಬ್ಯಾಂಕ್ ಮತ್ತು ಲೋಕೋಪಯೋಗಿ ವಸತಿ ಗೃಹ ಒಳಗೊಂಡು, ಎಫ್.ಎಂ.ಕೆ.ಸಿ ವೃತ್ತದಲ್ಲಿರುವ ಎಸ್.ಎಲ್. ಶ್ರೀಪತಿಯವರ ವಾಣಿಜ್ಯ ಕಟ್ಟಡದ ಹತ್ತಿರ ಬಲಕ್ಕೆ ತಿರುಗಿ, ಪೂರ್ವಭಿಮುಖವಾಗಿ ರಥಬೀದಿಯಿಂದ ಮುಂದಕ್ಕೆ ಸಾಗಿ, ಪುಂಡರೀಕಾಕ್ಷ ರವರ ವಿನಾಯಕ ಹಾರ್ಡ್‌ವೇರ್ ಶಾಪ್‌ನ ಹತ್ತಿರ ತಲುಪಿ, ತದನಂತರ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸಿ, ಗೋವಿಂದರಾಜ್ ರವರ ವಾಣಿಜ್ಯ ಕಟ್ಟಡದ ಬಲಭಾಗಕ್ಕೆ ತಿರುಗಿ ಪಶ್ಚಿಮಾಭಿಮುಖ ವಾಗಿ ಚಲಿಸಿ ತದನಂತರ ಎಡಕ್ಕೆ ತಿರುಗಿ ದಕ್ಷಿಣಾಭಿಮುಖ ವಾಗಿ ಮುಂದಕ್ಕೆ ಸಾಗಿ, ಡಾ॥ ದೇವದಾಸ್ ಭಟ್ ರವರ ಮನೆಯ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ ತದನಂತರ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ ಜಿ.ಎಂ.ಪಿ ಶಾಲೆಯ ಹಿಂಭಾಗ ಇರುವ ರಸ್ತೆಯಿಂದ ಬಿ.ಎಂ.ರಸ್ತೆ ಬಂದು ತಲುಪುತ್ತದೆ.<br>**ಉತ್ತರ : ರಥ ಬೀದಿ ರಸ್ತೆ ಬಲ ಪಾರ್ಶ್ವ**<br>**ಪೂರ್ವ : ಕೆ.ಇ.ಬಿ.ಹಿಂಭಾಗ ರಸ್ತೆ**<br>**ಪಶ್ಚಿಮ : ಬಿ ಎಂ ರಸ್ತೆ**<br>**ದಕ್ಷಿಣ : ಚರ್ಚ್ ರಸ್ತೆ (ಬಾಪೂಜಿ ಬಡಾವಣೆ ರಸ್ತೆ)** |

| | | |
|---|---|---|
| 6 | **<u>ವಾರ್ಡ್ ಸಂಖ್ಯೆ-6</u>**<br>1. ಫಾತೀಮಾ ಕಾನ್ವೆಂಟ್ ಹಿಂಭಾಗ<br>2. ದಂಡಿನಪೇಟೆ ಭಾಗಶಃ<br>3. ಅಯ್ಯಪ್ಪ ಸ್ವಾಮಿ ದೇವಸ್ಥಾನ ರಸ್ತೆ<br>4. ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ<br>5. ವಿ.ಪಿ.ಪುಟ್ಟುಶೆಟ್ಟಿ ಬಡಾವಣೆ<br>6. ರಫೀಕ್ ಬಡಾವಣೆ<br>7. ಬಿ.ಎಂ.ರಸ್ತೆಯ ಎಡಭಾಗ<br>8. ಕಬ್ರಸ್ಥಾನ ರಸ್ತೆ ಎಡಭಾಗ | ದಂಡಿನಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಬಿ.ಎಂ.ರಸ್ತೆಯಲ್ಲಿ ಉತ್ತರಕ್ಕೆ ಸಾಗಿ, ಗೋಪಾಲ್ ಶೆಟ್ಟರ ಮನೆ, ಫಾತೀಮ ಕಾಂಪ್ಲೆಕ್ಸ್ ಒಳಗೊಂಡು ಎಫ್.ಎಂ.ಸಿ.ಸರ್ಕಲ್‌ಗೆ ಬಂದು ತಲುಪುತ್ತದೆ. ತದನಂತರ ಬಿ.ಎಂ.ರಸ್ತೆಯಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸಿ ಗಣೇಶ್ ಭವನ ಹೋಟೇಲ್ ಮತ್ತು ಶಾಂತಿ ಹೋಟೇಲ್ ತಲುಪಿ ತದ ನಂತರ ಎಡಕ್ಕೆ ತಿರುಗಿ ಕಬರಸ್ಥಾನದಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಎಂ.ಎಂ.ಚರಣ್ ರವರ ಮನೆಯನ್ನು ಒಳಗೊಂಡು ಕಾವೇರಿ ನದಿಗೆ ಬಂದು ತಲುಪುತ್ತದೆ.<br><br>**ಉತ್ತರ: ಬಿ.ಎಂ.ರಸ್ತೆ**<br>**ಪೂರ್ವ: ಬಿ.ಎಂ.ರಸ್ತೆ**<br>**ಪಶ್ಚಿಮ: ಕಬ್ರಸ್ಥಾನ ರಸ್ತೆ**<br>**ದಕ್ಷಿಣ: ಕಾವೇರಿ ಹೊಳೆ ಮತ್ತು ದಂಡಿನಪೇಟೆ ಮುಖ್ಯ ರಸ್ತೆ** |
| 7 | **<u>ವಾರ್ಡ್ ಸಂಖ್ಯೆ-7</u>**<br>1. ಬಿ.ಎಂ ರಸ್ತೆ ಎಡಭಾಗ<br>2. ಇಂದಿರಾ ಬಡಾವಣೆ<br>3. ಕಬ್ರಸ್ಥಾನ ರಸ್ತೆ ಬಲಭಾಗ<br>4. ಬಿದ್ದಪ್ಪ ಬಡಾವಣೆ<br>5. ಫರ್ನಾಂಡೀಸ್ ಬಡಾವಣೆ | ಕಾವೇರಿ ಹೊಳೆಯಿಂದ ಪ್ರಾರಂಭವಾಗಿ ಉತ್ತರಾಭಿಮುಖಾಗಿ ಚಲಿಸಿ ರಾಬಿಯಾ ರವರ ಹೋಂ ಸ್ಟೇ ಮತ್ತು ಭಾಸ್ಕರ ರವರ ಮನೆಯನ್ನು ಒಳಗೊಂಡು ವಿ.ಎಲ್.ಗೌರಿಶ್ ರವರ ಕಟ್ಟಡಕ್ಕೆ ಬಂದು ತಲುಪಿ ನಂತರ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಬಿ.ಎಂ.ರಸ್ತೆಯಲ್ಲಿ ಚಲಿಸಿ ಶ್ರೀ.ರಾಮ್‌ದಾಸ್ ಲಾಡ್ಜ್ ಪಕ್ಕದಲ್ಲಿರುವ ಬಟ್ಟೆ ಅಂಗಡಿಗೆ ತಲುಪಿ ತದ ನಂತರ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸಿ ಅರುಣಾಜ್ಯೋತಿ ರವರ ಮನೆ ಮತ್ತು ಇಂದಿರಾ ಬಡಾವಣೆ, ಬಿದ್ದಪ್ಪ ಬಡಾವಣೆ ಒಳಗೊಂಡು ಕಾವೇರಿ ಹೊಳೆಗೆ ಬಂದು ಸೇರುತ್ತದೆ.<br><br>**ಉತ್ತರ: ಬಿ.ಎಂ.ರಸ್ತೆ**<br>**ಪೂರ್ವ: ಕಬ್ರಸ್ಥಾನ ರಸ್ತೆ**<br>**ಪಶ್ಚಿಮ: ಅಂಬೇಡ್ಕರ್ ಬಡಾವಣೆ ಮತ್ತು ನಿಜಾಮುದ್ದೀನ್ ಬಡಾವಣೆ**<br>**ದಕ್ಷಿಣ: ಕಾವೇರಿ ಹೊಳೆ** |
| 8 | **<u>ವಾರ್ಡ್ ಸಂಖ್ಯೆ -8</u>**<br>1. ಅಂಬೇಡ್ಕರ್ ಬಡಾವಣೆ<br>2. ನಿಜಾಮುದ್ದೀನ್ ಬಡಾವಣೆ<br>3. ನಿಂಗೇಗೌಡ ಬಡಾವಣೆ<br>4. ಪಂಪ್‌ಹೌಸ್ ರಸ್ತೆ<br>5. ಬಿ.ಎಂ.ರಸ್ತೆ ಎಡಭಾಗ<br>6. ಭವಾನಿ ಬಡಾವಣೆ<br>7. ಯೋಗಾನಂದ ಬಡಾವಣೆ<br>8. ಚಂದ್ರಶೇಖರ್ ಬಡಾವಣೆ<br>9. ಎಸ್.ಎಲ್.ಎನ್.ಪ್ರಾಪರ್ಟಿ<br>10. ನಂಜಪ್ಪ ಬಡಾವಣೆ<br>11. ಕರ್ನಾಟಕ ಅರಣ್ಯ ತರಬೇತಿ ಕೇಂದ್ರ | ಅರಣ್ಯ ತರಬೇತಿ ಕೇಂದ್ರದಿಂದ ಉತ್ತರಾಭಿಮುಖವಾಗಿ ಚಲಿಸಿ, ಬಲಕ್ಕೆ ತಿರುಗಿ, ಬಿ.ಎಂ.ರಸ್ತೆಯಿಂದ ಪೂರ್ವಾಭಿಮುಖವಾಗಿ ಚಲಿಸಿ, ಮಾರಮ್ಮ ದೇವಸ್ಥಾನದಿಂದ ಮುಂದಕ್ಕೆ ಸಾಗಿ, ಜಾಮಿಯಾ ಮಸೀದಿ ವಾಣಿಜ್ಯ ಮಳಿಗೆಯಿಂದ ಬಲಕ್ಕೆ ತಿರುಗಿ, ಇಂದಿರಾ ಬಡಾವಣೆಯ ರಸ್ತೆಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಕಾವೇರಿ ಹೊಳೆಗೆ ಸೇರುತ್ತದೆ.<br><br>**ಉತ್ತರ : ಬಿ.ಎಂ ರಸ್ತೆ**<br>**ಪೂರ್ವ: ಇಂದಿರಾ ಬಡಾವಣೆ ರಸ್ತೆ**<br>**ಪಶ್ಚಿಮ : ಅರಣ್ಯ ಇಲಾಖೆ ತರಬೇತಿ ಕೇಂದ್ರ**<br>**ದಕ್ಷಿಣ : ಕಾವೇರಿ ನದಿ** |
| 9 | **<u>ವಾರ್ಡ್ ಸಂಖ್ಯೆ -9</u>**<br>1. ಬಿ.ಎಂ. ರಸ್ತೆ<br>2. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು & ಅದರ ಮುಂಭಾಗದ ಪ್ರದೇಶ<br>3. ಅಥಿತಿ ರೆಸ್ಟೋರೆಂಟ್ ಹೋಟೆಲ್‌ನ ಸುತ್ತಮುತ್ತಲಿನ ಪ್ರದೇಶ | ಅರಣ್ಯ ತರಬೇತಿ ಕೇಂದ್ರದಿಂದ ಪ್ರಾರಂಭವಾಗಿ ಉತ್ತರಾಭಿಮುಖ ವಾಗಿ ಚಲಿಸಿ ಬಿ.ಎಂ ರಸ್ತೆಗೆ ತಲುಪಿ ತದನಂತರ ಪಶ್ಚಿಮಾಭಿ ಮುಖವಾಗಿ ಚಲಿಸಿ ಹೋಟೆಲ್ ಅತಿಥಿ ಕಂಫರ್ಟ್ಸ್ ಒಳಗೊಂಡಂತೆ ಮತ್ತು ಉತ್ತರಾಭಿಮುಖವಾಗಿ ಚಲಿಸಿ ಮಾದಾಪಟ್ಟಣ ರಸ್ತೆ ಮುಂದಕ್ಕೆ ಚಲಿಸಿ ಸ.ನಂ 33/4 ಕ್ಕೆ ಬಂದು ತಲುಪಿ ತದನಂತರ ಪಶ್ಚಿಮಾಭಿಮುಖವಾಗಿ ಚಲಿಸಿ ಸ.ನಂ 37/3 ಪುರಸಭೆ ಗಡಿಯನ್ನು ತಲುಪಿ ತದನಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸ್ಕಂದ ಫಾರ್ಮ ತಲುಪಿ ಮತ್ತು ಮಾದಾಪಟ್ಟಣ ನ್ಯಾಯ ಬೆಲೆ ಅಂಗಡಿ ಪಕ್ಕದ ರಸ್ತೆ ಮುಖಾಂತರ ಚಲಿಸಿ ಗಿರೀಶ್ ಬಿನ್ ಕೃಷ್ಣಾಚಾರ ಮನೆ ಮತ್ತು ಶ್ರೀ.ಕೆ.ಎ.ಅನುಕುಮಾರ್ ಬಿನ್/ಆನಂದ ರವರ ಮನೆಯನ್ನು ಒಳಗೊಂಡು ಬಿ ಎಂ |

| | | |
|---|---|---|
| | 4. ಗ್ರೀನ್ ಹೋಟೆಲ್<br>5. ಎಸ್.ಎಲ್.ಎನ್ ಪ್ರೋಪರ್ಟೀಸ್<br>6. ಮಾದಾಪಟ್ಟಣ ಭಾಗಶಃ<br>7. ಸ್ಕಂದ ಫಾರ್ಮ್ | ರಸ್ತೆಯನ್ನು ತಲುಪಿ ತದನಂತರ ಗ್ರೀನ್ ಹೋಟೆಲ್ ಪಕ್ಕದಲ್ಲಿರುವ ರಸ್ತೆ ಮುಖಾಂತರ ಕಾವೇರಿ ನದಿವರೆಗೆ ಅಂತ್ಯಗೊಳ್ಳುತ್ತದೆ<br>**ಉತ್ತರ: ಸರ್ವೆನಂ 37/3, 37/1, 36/1, 33/1, 34/4 ಖಾಸಗಿ ಖಾಲಿ ನಿವೇಶನ**<br>**ಪೂರ್ವ: ಅರಣ್ಯ ತರಬೇತಿ ಕೇಂದ್ರ ಬಿ.ಎಮ್. ರಸ್ತೆ ಮತ್ತು ಮಾದಪಟ್ಟಣ ರಸ್ತೆ**<br>**ಪಶ್ಚಿಮ: ಪುರಸಭೆ ಗಡಿ**<br>**ದಕ್ಷಿಣ: ಕಾವೇರಿ ನದಿ** |
| 10 | **<u>ವಾರ್ಡ್ ಸಂಖ್ಯೆ 10</u>**<br>1. ಗುಂಡೂರಾವ್ ಬಡಾವಣೆ<br>2. ಆರ್.ಕೆ.ಬಡಾವಣೆ ಭಾಗಶಃ<br>3. ಬೈಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ<br>4. ಮೆಟ್ರಿಕ್ ಬಾಲಕರ ವಿದ್ಯಾರ್ಥಿ ನಿಲಯ<br>5. ಗಂಧದ ಕೋಟೆ<br>6. ವಿ.ಎಲ್.ಗೌರೀಶ್ ರವರ ತೋಟ<br>7. ಪರಿವಾರ ಜವರಪ್ಪ ಮಲ್ಲೇಶ, ವೆಂಕಟೇಶ ಬಡಾವಣೆ<br>8. ತಾವರೆ ಕೆರೆ<br>9. ಪೂನಂ ಲೇಔಟ್<br>10. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು<br>11. ಕಾಶಿವಿಶ್ವನಾಥ ದೇವಾಲಯ<br>12. ಮಾದಾಪಟ್ಟದಿಂದ ಗೊಂದಿಬಸವನಹಳ್ಳಿಗೆ ಹೋಗುವ ಬಲಭಾಗದ ಪ್ರದೇಶ | ಶ್ರೀ.ಮಾರಮ್ಮ ದೇವಸ್ಥಾನ ಮುಂಭಾಗ ಇರುವ ರಸ್ತೆಯಲ್ಲಿ ಮಾರುತಿ ವರ್ಕ್ಸ್ ಶಾಪ್ ನಿಂದ ಉತ್ತರಾಭಿಮುಖವಾಗಿ ಚಲಿಸಿ ಪಶ್ಚಿಮಾಭಿಮುಖವಾಗಿ ಚಲಿಸಿ ರುಕ್ಕಮ್ಮ, ನಾಗಮ್ಮ ಪ್ರಭ ಮನೆ ಒಳಗೊಂಡು ತದನಂತರ ಉತ್ತರಾಭಿಮುಖವಾಗಿ ಚಲಿಸಿ ದಾಸೇಗೌಡರ ಮನೆ ಮತ್ತು ಸ.ನಂ 5/1 ಮತ್ತು ಸರ್ಕಾರಿ ಶಾಲೆ ಹಿಂಭಾಗದಿಂದ ಚಂದ್ರಕಲಾ ಕೋಂ /ಸುಬ್ಬಣ್ಣ ಒಳಗೊಂಡು ಮತ್ತು ನಂಜುಂಡೇಶ್ವರ ಬಡಾವಣೆ ಭಾಗಶಃ ಆರ್ ಸಿ ಬಡಾವಣೆ ಭಾಗಶಃ ಮುಖಾಂತರ ಮುಂದಕ್ಕೆ ಸಾಗಿ ಸ.ನಂ 2/1, 1/1, ಬಂದು ತಲುಪಿ ತದನಂತರ ಪಶ್ಚಿಮಾಭಿ ಮುಖವಾಗಿ ಚಲಿಸಿ ಮಂದಣ್ಣ ರವರ ಮನೆ ಮತ್ತು ವಿ.ಎಲ್. ಗೌರೀಶ್ ರವರ ಜಮೀನಿನ ಪಕ್ಕದಲ್ಲಿ ಹಾದು ಹೋಗುವ ರಸ್ತೆ ಮುಖಾಂತರ ಸಾಗಿ, ತದನಂತರ ಎಡಕ್ಕೆ ತಿರುಗಿ ಎಂ.ಜೆ ಚಂದ್ರು ಬಿನ್/ಜವರಪ್ಪ ಮತ್ತು ನಾಗಣ್ಣ ಬಿನ್/ಮಲ್ಲಪ್ಪ ಮತ್ತು ಕಾಶಿ ವಿಶ್ವನಾಥ ದೇವಾಲಯ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಒಳಗೊಂಡು ಬಿ.ಎಂ ರಸ್ತೆಯ ಮುಖಾಂತರ ಪೂರ್ವಕ್ಕೆ ಚಲಿಸಿ ತಾವರೆಕೆರೆ ಮತ್ತು ಬ್ಲೂಮೂನ್ ಪೆಟ್ರೋಲ್ ಬಂಕ್ ಟಿ.ವಿ.ಎಸ್ ಶೋ ರೂಂ ಒಳಗೊಂಡಂತೆ ಮಾರುತಿ ವರ್ಕ್‌ಶಾಪ್ ಪಕ್ಕದಲ್ಲಿ ರುವ ಖಾಲಿ ಜಾಗಕ್ಕೆ ಅಂತ್ಯಗೊಳ್ಳುತ್ತದೆ.<br><br>**ಉತ್ತರ: ಹೆಚ್.ಆರ್.ಪಿ ಕಾಲೋನಿ ರಸ್ತೆ ನಂಜುಡೇಶ್ವರ ಬಡಾವಣೆ ಭಾಗಶಃ ಬಡಾವಣೆಯ ರಸ್ತೆ, ಆರ್.ಸಿ. ಬಡಾವಣೆಯ ಭಾಗಶಃ ಬಡಾವಣೆ ರಸ್ತೆ.**<br>**ಪೂರ್ವ: ಬೈಚನಹಳ್ಳಿ ರಸ್ತೆ**<br>**ಪಶ್ಚಿಮ: ಮಾದಪಟ್ಟಣ ರಸ್ತೆ**<br>**ದಕ್ಷಿಣ: ಬಿ.ಎಂ ರಸ್ತೆ** |
| 11 | **<u>ವಾರ್ಡ್ ಸಂಖ್ಯೆ –11</u>**<br>1. ಬೈಚನಹಳ್ಳಿ<br>2. ಎಂ.ಪಿ.ಎಂ.ಸಿ<br>3. ಕಾವೇರಿ ಬಡಾವಣೆ<br>4. ಐ.ಬಿ.ರಸ್ತೆ ಎಡಭಾಗ<br>5. ಬಿ.ಎಂ.ರಸ್ತೆ ಬಲಭಾಗ<br>6. ಅರಣ್ಯ ಇಲಾಖೆ<br>7. ಪುರಸಭೆ ಕಾರ್ಯಾಲಯ<br>8. ಶ್ರೀಮಹಾಗಣಪತಿ ದೇವಸ್ಥಾನ | ಶ್ರೀಮಾರಮ್ಮ ದೇವಸ್ಥಾನದ ಮುಂಭಾಗವಿರುವ ಬೈಚನಹಳ್ಳಿ ರಸ್ತೆಯಿಂದ ಪ್ರಾರಂಭವಾಗಿ ಉತ್ತರಾಭಿಮುಖವಾಗಿ ಚಲಿಸಿ ತದನಂತರ ಪಶ್ಚಿಮಾಭಿಮುಖವಾಗಿ ಚಲಿಸಿ ಉತ್ತಾರಾಭಿ ಮುಖವಾಗಿ ಅಣ್ಣೇಗೌಡ, ಧನರಾಜು ರವರ ಮನೆಯನ್ನು ಒಳಗೊಂಡು ಗುಂಡುರಾವ್ ಬಡಾವಣೆಯ ಮುಖ್ಯರಸ್ತೆಗೆ ಬಂದು ತಲುಪುತ್ತದೆ. ತದನಂತರ ಉತ್ತರಾಭಿಮುಖವಾಗಿ ಚಲಿಸಿ ಬಿ.ಎಲ್.ಶಿವಕುಮಾರ್ ರವರ ಮನೆಯನ್ನು ಒಳಗೊಂಡಂತೆ ಹೆಚ್.ಆರ್.ಪಿ.ಕಾಲೋನಿಯ ಮುಖ್ಯ ರಸ್ತೆಗೆ ಬಂದು ತಲುಪುತ್ತದೆ. ತದನಂತರ ಪೂರ್ವಾಭಿಮುಖವಾಗಿ ಚಲಿಸಿ ನೀರಿನ ಟ್ಯಾಂಕ್ ಮತ್ತು ವಾಟರ್ ಬೋರ್ಡ್ ವಸತಿ ಗೃಹಗಳನ್ನು ಒಳಗೊಂಡಂತೆ ಪೂರ್ವಾಭಿಮುಖವಾಗಿ ಹೆಚ್.ಆರ್.ಪಿ ಕಾಲೋನಿಯಲ್ಲಿ ಮುಂದಕ್ಕೆ ಸಾಗಿ ಎ.ಪಿ.ಎಂ.ಸಿ.ಯನ್ನು ಒಳಗೊಂಡಂತೆ ಐ.ಬಿ.ಮುಂಭಾಗ ದಲ್ಲಿರುವ ಸರ್ಕಲ್‌ಗೆ ಬಂದು ತಲುಪಿ ತದನಂತರ ಅರಣ್ಯ ಕಛೇರಿ ಮತ್ತು ಪುರಸಭೆ ಕಾರ್ಯಾಲಯವನ್ನು ಒಳಗೊಂಡು ಶ್ರೀಮಾಹಾಗಣಪತಿ ದೇವಸ್ಥಾನದ ಮುಂದೆ ಇರುವ ಬಿ.ಎಂ. ರಸ್ತೆಗೆ ಬಂದು ತಲುಪಿ ತದನಂತರ ಪಶ್ಚಿಮಾಭಿಮುಖವಾಗಿ ಬಿ.ಎಂ. ರಸ್ತೆಯಲ್ಲಿ ಚಲಿಸಿ ಶ್ರೀಮಾರಮ್ಮ ದೇವಸ್ಥಾನ ಎದುರುಗಡೆ ಇರುವ ಫರ್ನಾಂಡಿಸ್ ವಾಣಿಜ್ಯ ಕಟ್ಟಡಕ್ಕೆ ಬಂದು ತಲುಪುತ್ತದೆ.<br>**ಉತ್ತರ: ಹೆಚ್.ಆರ್.ಪಿ ಕಾಲೋನಿ ರಸ್ತೆ**<br>**ಪೂರ್ವ: ಐ ಬಿ ರಸ್ತೆ**<br>**ಪಶ್ಚಿಮ: ಬೈಚನಹಳ್ಳಿ ರಸ್ತೆ**<br>**ದಕ್ಷಿಣ: ಬಿ ಎಂ ರಸ್ತೆ** |

| | | |
|---|---|---|
| 12 | **ವಾರ್ಡ್ ಸಂಖ್ಯೆ –12**<br>1. ಐ.ಬಿ.ರಸ್ತೆ<br>2. ಬೈಪಾಸ್ ರಸ್ತೆ ಎಡ ಮತ್ತು ಬಲ<br>3. ರಾಧಕೃಷ್ಣ ಬಡಾವಣೆ<br>4. ಸಾರ್ವಜನಿಕ ಆಸ್ಪತ್ರೆ<br>5. ತಹಶೀಲ್ದಾರ್ ರವರ ಕಛೇರಿ<br>6. ಸೋಮೇಶ್ವರ ದೇವಸ್ಥಾನ ರಸ್ತೆಯ ಬಲಭಾಗ | ಬಿ.ಎಂ.ರಸ್ತೆಯಲ್ಲಿರುವ ಶ್ರೀ.ಮಹಾಗಣಪತಿ ದೇವಸ್ಥಾನದ ಎದುರು ಗಡೆ ಇರುವ ಐ.ಬಿ.ಗೆ ಹೋಗುವ ರಸ್ತೆಯಿಂದ ಪ್ರಾರಂಭವಾಗಿ ಪಶ್ಚಿಮಾಭಿಮುಖವಾಗಿ ಚಲಿಸಿ ತದನಂತರ ಮಹಿಳಾ ಸಮಾಜ ಕಟ್ಟಡದಿಂದ ಬಲಕ್ಕೆ ತಿರುಗಿ ಹಾಗೆಯೇ ಉತ್ತರಾಭಿಮುಖವಾಗಿ ಚಲಿಸಿ ಗೌಡ ಸಮಾಜದ ರಸ್ತೆಗೆ ಬಂದು ತಲುಪುತ್ತದೆ. ತದನಂತರ ಪೂರ್ವಾಭಿಮುಖವಾಗಿ ಸಾಗಿ ಬಶೀರ್ ರವರ ವಾಣಿಜ್ಯ ಕಟ್ಟಡದ ಮುಂಭಾಗದ ಸರ್ಕಲ್‌ಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆತಿರುಗಿ ಪೂರ್ವಾರಾಭಿಮುಖವಾಗಿ ಸಾಗಿ ಸೋಮೇಶ್ವರ ದೇವಸ್ಥಾನದ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ ಚಲಿಸಿ ಸೋಮವಾರಪೇಟೆ ಮುಖ್ಯ ರಸ್ತೆಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆತಿರುಗಿ ಸೋಮವಾರಪೇಟೆ ಮುಖ್ಯರಸ್ತೆಯಿಂದ ದಕ್ಷಿಣಕ್ಕೆ ಸಾಗಿ ರಥಬೀದಿ ಮುಖ್ಯರಸ್ತೆಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆ ತಿರುಗಿ ರಥಬೀದಿ ಮುಖ್ಯರಸ್ತೆಯ ಮುಖಾಂತರ ಪಶ್ಚಿಮಾಭಿಮುಖವಾಗಿ ಚಲಿಸಿ ಮಹಾಗಣಪತಿ ದೇವಸ್ಥಾನಕ್ಕೆ ಬಂದು ತಲುಪುತ್ತದೆ.<br><br>**ಉತ್ತರ : ಸೋಮೇಶ್ವರ ದೇವಸ್ಥಾನ ರಸ್ತೆ**<br>**ಪೂರ್ವ : ಸೋಮವಾರಪೇಟೆ ಮುಖ್ಯ ರಸ್ತೆ**<br>**ಪಶ್ಚಿಮ : ಐ.ಬಿ.ರಸ್ತೆ ಮತ್ತು ಗೌಡಸಮಾಜ ರಸ್ತೆ**<br>**ದಕ್ಷಿಣ : ರಥಬೀದಿ ಎಡಪಾರ್ಶ್ವ** |
| 13 | **ವಾರ್ಡ್ ಸಂಖ್ಯೆ –13**<br>1. ಅವದಾನಿ ಬಡಾವಣೆ<br>2. ಬಸಪ್ಪ ಬಡಾವಣೆ<br>3. ಶ್ರೀ ಸಾಯಿ ಬಡಾವಣೆ<br>4. ಸೋಮವಾರಪೇಟೆ ರಸ್ತೆ ಬಲ ಬದಿ<br>5. ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ವಸತಿ ಗೃಹ<br>6. ಸೋಮೇಶ್ವರ ಬಡಾವಣೆ<br>7. ಆದಿಶಂಕರಾಚಾರ್ಯ ಬಡಾವಣೆ ಭಾಗಶ: | ಸೋಮಾವಾರಪೇಟೆ ರಸ್ತೆಯಲ್ಲಿರುವ ಮುಳ್ಳುಸೋಗೆ ಪೇಪರ್ ಶಿವಣ್ಣರವರ ಮನೆಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಶ್ರೀ ಸಾಯಿ ಲೇಔಟ್ ತಲುಪಿ ನಂತರ ಸೋಮೇಶ್ವರ ಕೆರೆಯಿಂದ ಪಶ್ಚಿಮಾಭಿಮುಖವಾಗಿ ಚಲಿಸಿ ಸೋಮೇಶ್ವರ ಬಡಾವಣೆ ಒಳಗೊಂಡು ತದನಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸೋಮೇಶ್ವರ ರಸ್ತೆಗೆ ಬಂದು ತಲುಪಿ ತದನಂತರ ಪೂರ್ವಾಭಿಮುಖವಾಗಿ ಚಲಿಸಿ ಸೋಮವಾರ ಪೇಟೆ ಮುಖ್ಯ ರಸ್ತೆಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆ ತಿರುಗಿ ಅನುಗ್ರಹ ಕಾಲೇಜುನ್ನು ಒಳಗೊಂಡು ಬಸವೇಶ್ವರ ದೇವಸ್ಥಾನಕ್ಕೆ ತಲುಪಿ ತದನಂತರ ಎಡಕ್ಕೆ ತಿರುಗಿ ಶ್ರೀಕಾಶಿಪತಿ ರವರ ಮನೆಯನ್ನು ಒಳಗೊಂಡಂತೆ ಕಾವೇರಿ ಹೊಳೆಗೆ ಹೊಗುವ ರಸ್ತೆಯನ್ನು ತಲುಪುತ್ತದೆ.<br><br>**ಉತ್ತರ : ಶಿವಣ್ಣ ರವರ ಜಾಗ**<br>**ಪೂರ್ವ : ಕಾವೇರಿ ನದಿ**<br>**ಪಶ್ಚಿಮ : 3ನೇ ಅಡ್ಡ ರಸ್ತೆ ಸೋಮೇಶ್ವರ ಬಡಾವಣೆ**<br>**ದಕ್ಷಿಣ : ಆದಿಶಂಕರಾಚಾರ್ಯ ಬಡಾವಣೆ ಎಡಪಾರ್ಶ್ವ** |
| 14 | **ವಾರ್ಡ್ ಸಂಖ್ಯೆ 14**<br>1. ವೆಂಕಟೇಶ್ವರ ಬಡಾವಣೆ<br>2. ಮಾರುತಿ ಬಡಾವಣೆ<br>3. ಓಂಕಾರ ಬಡಾವಣೆ<br>4. ಕೈಗಾರಿಕ ಬಡಾವಣೆ<br>5. ಸೋಮೇಶ್ವರ ಕೆರೆ<br>6. ನಿರ್ಮಿತಿ ಕೇಂದ್ರ<br>7. ಉಪನೋಂದಣಾಧಿಕಾರಿ ಕಛೇರಿ ಹಿಂಭಾಗ ಪ್ರದೇಶ<br>8. ಗೌಡ ಸಮಾಜ<br>9. ಅಂಗನವಾಡಿ<br>10. ಅಂಬೇಡ್ಕರ್ ಬಡಾವಣೆ<br>11. ಜನತಾ ಕಾಲೋನಿ ರಸ್ತೆಯ ಬಲಭಾಗ | ಸೋಮವಾರಪೇಟೆ ಮುಖ್ಯರಸ್ತೆಯಲ್ಲಿರುವ ರೂಪ ಕೋಂ /ಪ್ರಸನ್ನ ವಾಣಿಜ್ಯ ಕಟ್ಟಡದಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಭಾರತ್‌ಗ್ಯಾಸ್ ದಿನೇಶ್ ರವರ ವಾಸದ ಮನೆ ಒಳಗೊಂಡಂತೆ ಸೋಮೇಶ್ವರ ಕೆರೆಗೆ ಬಂದು ತಲುಪಿ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ ಸರ್ವೆ ನಂ 57 ಕ್ಕೆ ತಲುಪಿ ತದನಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸೋಮೇಶ್ವರ ದೇವಸ್ಥಾನ ಮುಖ್ಯ ರಸ್ತೆಗೆ ತಲುಪಿ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ ಬಾಲ್ಯ ಮಕ್ಕಳ ಆಸ್ಪತ್ರೆ ಮತ್ತು ಜೀವಿತ ಡಯಾಗ್ನೋಸ್ಟಿಕ್ ಸೆಂಟರ್ ಒಳಗೊಂಡಂತೆ ಕೋಣಮಾರಮ್ಮ ದೇವಸ್ಥಾನದ ಸರ್ಕಲ್ ತಲುಪಿ ತದನಂತರ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಗೌಡಸಮಾಜ ಅಂಗನವಾಡಿ ಒಳಗೊಂಡಂತೆ ಜನತಾ ಕಾಲೋನಿ ಸರ್ಕಲ್ ಬಂದು ತದನಂತರ ಜನತಾ ಕಾಲೋನಿ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ ಚಲಿಸಿ ಜನತಾ ಕಾಲೋನಿ ಬಲ ಭಾಗವನ್ನು ಸೇರಿಸಿಕೊಂಡು ಸೋಮವಾರಪೇಟೆ ರಸ್ತೆಗೆ ಬಂದು ತಲುಪುತ್ತದೆ.<br><br>**ಉತ್ತರ : ಜನತಾ ಕಾಲೋನಿ ರಸ್ತೆ**<br>**ಪೂರ್ವ : ಸೋಮವಾರಪೇಟೆ ಮುಖ್ಯ ರಸ್ತೆ**<br>**ಪಶ್ಚಿಮ : ಗೌಡ ಸಮಾಜ ರಸ್ತೆ**<br>**ದಕ್ಷಿಣ : ಸೋಮೇಶ್ವರ ದೇವಸ್ಥಾನ ರಸ್ತೆ** |

| | | |
|---|---|---|
| 15 | **ವಾರ್ಡ್ ಸಂಖ್ಯೆ –15**<br>1. ಕುವೆಂಪು ಬಡಾವಣೆ<br>2. ಶ್ರೀನಿಧಿ ಬಡಾವಣೆ<br>3. ತಪೋವನ<br>4. ತಾಲ್ಲೂಕು ಪಂಚಾಯಿತಿ ಹಿಂಭಾಗ<br>5. ಗುಮ್ಮನಕೊಲ್ಲಿ ಸರ್ಕಾರಿ ಶಾಲೆಯ ಹಿಂಭಾಗ<br>6. ನಂದಿ ಬಡಾವಣೆ<br>7. ಕಾವೇರಿ ಬಡಾವಣೆ<br>8. ಕೆ.ಪಿ.ಚಂದ್ರಕಲಾ ಬಡಾವಣೆ | ಮುಳ್ಳುಸೋಗೆ ಸನಂ–62 ಕಾವೇರಿ ಹೊಳೆಯಿಂದ ಪ್ರಾರಂಭ ವಾಗಿ ಪಶ್ಚಿಮಾಭಿಮುಖವಾಗಿ ಚಲಿಸಿ ಸೋಮವಾರಪೇಟೆ ಮುಖ್ಯರಸ್ತೆಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆ ತಿರುಗಿ ಉತಾರಾಭಿಮುಖವಾಗಿ ಚಲಿಸುತ್ತಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಳ್ಳುಸೋಗೆ, ತಾಲ್ಲೂಕು ಪಂಚಾಯಿತಿ ಕುಶಾಲನಗರ ಒಳಗೊಂಡಂತೆ ಮುಂದಕ್ಕೆ ಸಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಮ್ಮನಕೊಲ್ಲಿ ಮುಂದಕ್ಕೆ ಸಾಗಿ ಪ್ರವೀಣ್ ದೇವರಗುಂಡ ಸೋಮಪ್ಪ ರವರ ಮನಗೆ ತಲುಪುತ್ತದೆ. ತದನಂತರ ಬಲಕ್ಕೆ ತಿರುಗಿ ಸರ್ವೆ ನಂಬರ್–13, ಸರ್ವೆ ನಂಬರ್–14, ಸರ್ವೆ ನಂಬರ್–16, ಸರ್ವೆ ನಂಬರ್–18 ರಿಂದ ಕಾವೇರಿ ಹೊಳೆಗೆ ತಲುಪುತ್ತದೆ.<br><br>**ಉತ್ತರ : ಪುರಸಭೆ ಗಡಿ**<br>**ಪೂರ್ವ: ಕಾವೇರಿ ನದಿ**<br>**ಪಶ್ಚಿಮ : ಸೋಮವಾರಪೇಟೆ ರಸ್ತೆ**<br>**ದಕ್ಷಿಣ : ಶಿವಣ್ಣ ರವರ ಜಮೀನು** |
| 16 | **ವಾರ್ಡ್ ಸಂಖ್ಯೆ –16**<br>1. ಬಸಪ್ಪ ಬಡಾವಣೆ.<br>2. ಶಕ್ತಿ ಬಡಾವಣೆ | ಜನತಾ ಕಾಲೋನಿಯ ಮುಖ್ಯರಸ್ತೆ ಹನುಮಪ್ಪ ಬಿನ್/ಚಿಕಣ್ಣ ಮನೆಯಿಂದ ಪೂರ್ವಾಭಿಮುಖಾವಾಗಿ ಚಲಿಸಿ ಸೋಮವಾರ ಪೇಟೆ ಮುಖ್ಯ ರಸ್ತೆಗೆ ಬಂದು ತಲುಪುತ್ತದೆ. ತಂದ ನಂತರ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸೋಮವಾರಪೇಟೆ ರಸ್ತೆಯಲ್ಲಿ ಸಾಗಿ ಸೆಲೆಕ್ಟ್ ಸಾಮಿಲ್ ಒಳಗೊಂಡಂತೆ ಮಾರಮ್ಮ ದೇವಸ್ಥಾನಕ್ಕೆ ಬಂದು ತಲುಪುತ್ತಿದೆ ತದನಂತರ ಎಡಕ್ಕೆ ತಿರುಗಿ ಹಾರಂಗಿ ಮುಖ್ಯ ರಸ್ತೆಯಲ್ಲಿ ಸಾಗಿ ಪಶ್ಚಿಮಾಭಿಮುಖಾವಾಗಿ ಚಲಿಸಿ ಮಹದೇವಮ್ಮ ಕೋಂ/ ಲೇ.ಬಸಪ್ಪ ವಾಣಿಜ್ಯ ಕಟ್ಟಡದಿಂದ ಎಡಕ್ಕೆ ತಿರುಗಿ ದಕ್ಷಿಣಭಿಮುಖಾವಾಗಿ ಜನತಾ ಕಾಲೋನಿ ರಸ್ತೆಯಲ್ಲಿ ಮುಂದಕ್ಕೆ ಸಾಗಿ ಹನುಮಪ್ಪ ಬಿನ್/ಚಿಕ್ಕಣ ರವರ ಮನೆ ಹತ್ತಿರ ಅಂತ್ಯಗೊಳ್ಳುತ್ತದೆ.<br><br>**ಉತ್ತರ : ಹಾರಂಗಿ ರಸ್ತೆ**<br>**ಪೂರ್ವ: ಸೋಮವಾರಪೇಟೆ ಮುಖ್ಯ ರಸ್ತೆ**<br>**ಪಶ್ಚಿಮ : ಮಾರುತಿ ಬಡಾವಣೆ ರಸ್ತೆ**<br>**ದಕ್ಷಿಣ : ಜನತಾ ಕಾಲೋನಿ** |
| 17 | **ವಾರ್ಡ್ ಸಂಖ್ಯೆ 17**<br>1. ಜನತಾ ಕಾಲೋನಿ 1ನೇ ಕ್ರಾಸ್<br>2. ಜನತಾ ಕಾಲೋನಿ 2ನೇ ಕ್ರಾಸ್<br>3. ಜನತಾ ಕಾಲೋನಿ 3ನೇ ಕ್ರಾಸ್<br>4. ಜನತಾ ಕಾಲೋನಿ 4ನೇ ಕ್ರಾಸ್<br>5. ಜನತಾ ಕಾಲೋನಿ 5ನೇ ಕ್ರಾಸ್<br>6. ಜನತಾ ಕಾಲೋನಿ 6ನೇ ಕ್ರಾಸ್<br>7. ಜನತಾ ಕಾಲೋನಿ 7ನೇ ಕ್ರಾಸ್<br>8. ಮಾರುತಿ ಬಡಾವಣೆ | ಜನತಾ ಕಾಲೋನಿಯ ಸರ್ಕಲ್‌ನಿಂದ ಗೌರಿ ಗಣೇಶ ದೇವಸ್ಥಾನದಿಂದ ಪೂರ್ವಕ್ಕೆ ಚಲಿಸಿ ಜನತಾ ಕಾಲೋನಿ 1ನೇ ಕ್ರಾಸ್, 2ನೇ ಕ್ರಾಸ್, 3ನೇ ಕ್ರಾಸ್, 4ನೇ ಕ್ರಾಸ್, 5ನೇ ಕ್ರಾಸ್, 6ನೇ ಕ್ರಾಸ್, 7ನೇ ಕ್ರಾಸ್ ಮುಂದಕ್ಕೆ ಚಲಿಸಿ ಶ್ರೀ ಎಂ.ಸಿ ಸಂತೋಷ್ ಬಿನ್ ಚಿಕ್ಕಣ್ಣ ನಾಯಕ ರವರ ಮನೆಯಿಂದ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಚಲಿಸಿ ಹಾರಂಗಿ ಮುಖ್ಯ ರಸ್ತೆಗೆ ಬಂದು ತಲುಪುತ್ತದೆ ಮತ್ತೆ ಎಡಕ್ಕೆ ತಿರುಗಿ ಹಾರಂಗಿ ಮುಖ್ಯ ರಸ್ತೆಯಿಂದ ಗೋಪಾಲ ಸರ್ಕಲ್ ಬಂದು ತಲುಪಿ ತದನಂತರ ಎಡಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸಿ ಮೌಲ್ಯ ಎಂಟರ್ ಪ್ರೈಸಸ್ ಒಳಗೊಂಡಂತೆ ಗೌರಿ ಗಣೇಶ ದೇವಸ್ಥಾನಕ್ಕೆ ಬಂದು ತಲುಪುತ್ತದೆ<br><br>**ಉತ್ತರ: ಹಾರಂಗಿ ರಸ್ತೆ**<br>**ಪೂರ್ವ: ಮಾರುತಿ ಬಡಾವಣೆ ರಸ್ತೆ**<br>**ಪಶ್ಚಿಮ: ಗೋಪಾಲ ಸರ್ಕಲ್ ಹೋಗುವ ರಸ್ತೆ**<br>**ದಕ್ಷಿಣ: ಜನತಾ ಕಾಲೋನಿ ರಸ್ತೆ** |

| | | |
|---|---|---|
| 18 | **ವಾರ್ಡ್ ಸಂಖ್ಯೆ 18**<br>1. ಚಾಮುಂಡೇಶ್ವರಿ ಬಡಾವಣೆ<br>2. ಚನ್ನಕೇಶವ ಪ್ರೆಸ್ ಹಿಂಭಾಗದ ಮನೆಗಳು<br>3. ಆಫಿಸರ್ಸ್ ಕಾಲೋನಿ<br>4. ಮಾಲಿನ್ಯ ನೀರಿನ ಶುದ್ಧೀಕರಣ ಘಟಕ<br>5. ಅಂಬೇಡ್ಕರ್ ಭವನ<br>6. ವಾಲ್ಮೀಕಿ ಭವನ<br>7. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಿಂಭಾಗದ ವಸತಿಗಳು,<br>8. ಶಿವಾನಂದ ರವರ ಮನೆಯ ಸುತ್ತಮುತ್ತ ಪ್ರದೇಶ | ಕುಮಾರಸ್ವಾಮಿ ಜವರಮ್ಮ ಮತ್ತು ಜಯರಾಮು ರವರ ಇಟ್ಟಿಗೆ ಪ್ಯಾಕ್ಟರಿಯಿಂದ, ಹಾರಂಗಿ ರಸ್ತೆಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ, ಪ್ರಥಮ ದರ್ಜೆ ಕಾಲೇಜು ಒಳಗೊಂಡು ಮತ್ತು ಗೋಪಾಲ್ ಸರ್ಕಲ್‌ಗೆ ಬಂದು ತಲುಪಿ, ತದನಂತರ ಪೂರ್ವಾಭಿಮುಖವಾಗಿ ಚಲಿಸಿ, ಸೋಮವಾರಪೇಟೆ ಮುಖ್ಯರಸ್ತೆಗೆ ಬಂದು ತಲುಪುತ್ತದೆ. ತದನಂತರ ಎಡಕ್ಕೆ ತಿರುಗಿ ಸೋಮವಾರಪೇಟೆ ಮುಖ್ಯರಸ್ತೆಯಿಂದ ಉತ್ತರಾಭಿಮುಖವಾಗಿ ಸಾಗಿ, ಹೇಮಂತ್ ಕುಮಾರ್ ಸಿ.ಕೆ. ಬಿನ್/ಕುಶಾಲಪ್ಪ ರವರ ವಾಣಿಜ್ಯ ಕಟ್ಟಡ ಪಕ್ಕದಲ್ಲಿರುವ ರಸ್ತೆಯಿಂದ ಪಶ್ಚಿಮಾಭಿಮುಖವಾಗಿ ಚಲಿಸಿ, ನೀರಿನ ಟ್ಯಾಂಕ್ ಮತ್ತು ಭಾಗ್ಯ ಸುರೇಶ್ ರವರ ಮನೆಯನ್ನು ಒಳಗೊಂಡಂತೆ ಗುಮ್ಮನಕೊಲ್ಲಿ ಗಡಿಗೆ ಬಂದು ತಲುಪಿ, ಪಶ್ಚಿಮಾಭಿಮುಖವಾಗಿ ಚಲಿಸಿ ಸರ್ವೆ ನಂ 7, ಸರ್ವೆ ನಂ 5/1 ರಿಂದ ಸಾಗಿ ಶಿವಾನಂದ ರವರ ಮನೆಯ ಸುತ್ತಮುತ್ತಲು ಒಳಗೊಂಡು ಅಲ್ಲಿಂದ ಕುಮಾರಸ್ವಾಮಿ ಜವರಮ್ಮ ಮತ್ತು ಜಯರಾಮು ರವರ ಇಟ್ಟಿಗೆ ಪ್ಯಾಕ್ಟರಿಗೆ ತಲುಪುತ್ತದೆ.<br><br>**ಉತ್ತರ : ಪುರಸಭೆ ಗಡಿ**<br>**ಪೂರ್ವ : ಸೋಮವಾರಪೇಟೆ ರಸ್ತೆ**<br>**ಪಶ್ಚಿಮ : ಹಾರಂಗಿ ರಸ್ತೆ**<br>**ದಕ್ಷಿಣ : ಹಾರಂಗಿ ಮುಖ್ಯ ರಸ್ತೆ** |
| 19 | **ವಾರ್ಡ್ ಸಂಖ್ಯೆ – 19**<br>1. ಐ.ಬಿ.<br>2. ಹಳೆ ಹೌಸಿಂಗ್ ಬೋರ್ಡ್<br>3. ಸಿ.ಪಿ.ಸುಕನ್ಯ ಲೇಔಟ್/ ಚೂಡೇಗೌಡ ಬಡಾವಣೆ<br>4. ಡಾ:: ಶಿವರಾಮ ಕಾರಂತ ಬಡಾವಣೆ<br>5. ಥೋಮಸ್ ಬಡಾವಣೆ<br>6. ಸಿದ್ದಯ್ಯ ಪುರಾಣಿಕ ಬಡಾವಣೆ<br>7. ಕೋಣಮಾರಮ್ಮ ದೇವಸ್ಥಾನ ಹಿಂಭಾಗ | ಐ.ಬಿ.ಸರ್ಕಲ್‌ನಿಂದ ಪೂರ್ವಾಭಿಮುಖವಾಗಿ ಚಲಿಸಿ, ತದನಂತರ ಎಡಕ್ಕೆ ತಿರುಗಿ, ಗೌಡ ಸಮಾಜ ರಸ್ತೆಯ ಮುಂದಕ್ಕೆ ಸಾಗಿ, ಕೋಣಮಾರಿಯಮ್ಮ ದೇವಸ್ಥಾನವನ್ನು ಒಳಗೊಂಡಂತೆ ಡಾ// ಶಿವರಾಮಕಾರಂತ ಬಡಾವಣೆಯನ್ನು ಒಳಗೊಂಡಂತೆ, ಹೆಚ್.ಆರ್.ಪಿ. ಕಾಲೋನಿಯ ರಸ್ತೆಯ ಮುಂದಕ್ಕೆ ಸಾಗಿ, ಶ್ರೀ.ಕೆ.ಪ್ರಮೋದ್ ಮುತ್ತಪ್ಪ ರವರ ಮನೆಯ ಮುಂದೆ ರಸ್ತೆಯಿಂದ ಎಡಕ್ಕೆ ತಿರುಗಿ, ವೆಂಕಟಗಿರಿ ಗೌಡರ ಮನೆಯನ್ನು ಒಳಗೊಂಡು, ಐ.ಬಿ. ಸರ್ಕಲ್‌ಗೆ ಬಂದು ತಲುಪುತ್ತದೆ.<br><br>**ಉತ್ತರ : ಜನತಾ ಕಾಲೋನಿ ಸರ್ಕಲ್(ಗಡಿಯಾರ ಸರ್ಕಲ್)**<br>**ಪೂರ್ವ: ಗೌಡ ಸಮಾಜ ರಸ್ತೆ**<br>**ಪಶ್ಚಿಮ : ಹೆಚ್.ಆರ್.ಪಿ ಕಾಲೋನಿ ರಸ್ತೆ ಶ್ರೀ..ಪ್ರಮೋದ್ ಮುತ್ತಪ್ಪ ರವರ ಮನೆಯ ಮುಂದೆ ಇರುವ ರಸ್ತೆ)**<br>**ದಕ್ಷಿಣ : ಹೆಚ್.ಆರ್.ಪಿ ಕಾಲೋನಿ ರಸ್ತೆ** |
| 20 | **ವಾರ್ಡ್ ಸಂಖ್ಯೆ – 20**<br>1. ನೆಹರೂ ಬಡಾವಣೆ,<br>2. ಹೆಚ್.ಆರ್.ಪಿ.ಕಾಲೋನಿ,<br>3. ಕರಿಯಪ್ಪ ಬಡಾವಣೆ,<br>4. ವಿನಾಯಕ ಬಡಾವಣೆ | ಗೊಂದಿಬಸವನಹಳ್ಳಿಯ ಮುಖ್ಯರಸ್ತೆಯಿಂದ ದೊಡ್ಡಯ್ಯ ರವರ ಮನೆಯ ಪಕ್ಕದಲ್ಲಿರುವ ಉದ್ಯಾನವನದಿಂದ ಪಶ್ಚಿಮಾಭಿಮುಖ ವಾಗಿ ಚಲಿಸಿ ನೆಹರೂ ಬಡಾವಣೆಯನ್ನು ಒಳಗೊಂಡಂತೆ ಎ.ಜಿ.ರೂಪಾ ಕೋಂ/ಎನ್.ವಿ.ಹರೀಶ್ ರವರ ಮನೆಗೆ ತಲುಪಿ ತದನಂತರ ಎಡಕ್ಕೆ ತಿರುಗಿ ವಿನಾಯಕ ಬಡಾವಣೆಯನ್ನು ಒಳಗೊಂಡಂತೆ ದಕ್ಷಿಣಾಭಿಮುಖವಾಗಿ ಚಲಿಸಿ ತದನಂತರ ಪೂರ್ವಾಭಿಮುಖವಾಗಿ ಸಾಗಿ ಹೆಚ್.ಆರ್.ಪಿ. ಕಾಲೋನಿಯನ್ನು ಒಳಗೊಂಡಂತೆ ನೀರಿನ ಟ್ಯಾಂಕ್‌ನ ಹತ್ತಿರ ಬಂದು ತದನಂತರ ಎಡಕ್ಕೆ ತಿರುಗಿ ಶ್ರೀ.ಕೆ.ಪ್ರಮೋದ್ ಮುತ್ತಪ್ಪ ರವರ ಮನೆಮುಂದೆ ಉತ್ತರಕ್ಕೆ ಸಾಗಿ ಉದ್ಯಾನವನಕ್ಕೆ ತಲುಪುತ್ತದೆ.<br><br>**ಉತ್ತರ: ಗೊಂದಿಬಸವನಹಳ್ಳಿ ರಸ್ತೆ**<br>**ಪೂರ್ವ: ಹೆಚ್.ಆರ್.ಪಿ ಕಾಲೋನಿ ರಸ್ತೆ**<br>**ಪಶ್ಚಿಮ: ಹೊಸ ಹೌಸಿಂಗ್ ಬೋರ್ಡ್‌ಗೆ ಹೋಗುವ ರಸ್ತೆ**<br>**ದಕ್ಷಿಣ: ಹೆಚ್.ಆರ್.ಪಿ ಕಾಲೋನಿ ರಸ್ತೆ** |

| | | |
|---|---|---|
| 21 | **ವಾರ್ಡ್ ಸಂಖ್ಯೆ –21**<br>1. ಕರ್ನಾಟಕ ಗೃಹ ಮಂಡಳಿ<br>2. ಮಂಜುನಾಥ ಬಡಾವಣೆ<br>3. ಚೈತ್ರ ಬಡಾವಣೆ<br>4. ಆರ್ ಆರ್ ಆರ್ ಬಡಾವಣೆ<br>5. ಆರ್ ಸಿ ಬಡಾವಣೆ ಭಾಗಶಃ<br>6. ಮಂಜೇಗೌಡ ಬಡಾವಣೆ<br>7. ನಂಜುಂಡೇಶ್ವರ ಬಡಾವಣೆ<br>8. ಸ್ವಾಮಿ ಬಡಾವಣೆ<br>9. ಕಾರು ಚಾಲಕ ಬಡಾವಣೆ<br>10. ಗೊಂದಿಬಸವನಹಳ್ಳಿ ಭಾಗಶಃ<br>11. ಸಿದ್ದಯ್ಯ ಬಡಾವಣೆ<br>12. ಪಿ ಪಿ ಸತ್ಯನಾರಾಯಣ ಬಡಾವಣೆ | ನಂಜುಂಡೇಶ್ವರ ಬಡಾವಣೆಯ ಶಶಿಕಲಾ ಕೋಂ/ ರಾಮಚಂದ್ರ ಮೂರ್ತಿ ರವರ ಮನೆಯಿಂದ ಪಶ್ಚಿಮಾಭಿಮುಖವಾಗಿ ಚಲಿಸಿ ಆರ್.ಸಿ ಬಡಾವಣೆಯ ಭಾಗಶಃವನ್ನು ಒಳಗೊಂಡು ಬಿ ರವಿ ಬಿನ್ ಎಸ್.ಪಿ.ಬಾಬು ರವರ ಮನೆಯನ್ನು ಒಳಗೊಂಡು ತದನಂತರ ದಕ್ಷಿಣಾಭಿ ಮುಖವಾಗಿ ಚಲಿಸಿ ತದನಂತರ ಪಶ್ಚಿಮಾಭಿಮುಖವಾಗಿ ಚಲಿಸಿ ತದನಂತರ ಸರ್ವೆ ನಂಬರ್ 2/1 ತಲುಪಿ ತದ ನಂತರ ಹೆಚ್.ಆರ್.ಸುಚಿತ್ರ ರವರ ಮನೆ ಮತ್ತು ಕಾಳಯ್ಯ ಬಿನ್/ಪೂವಯ್ಯ ರವರ ಮನೆ ಮತ್ತು ಹೇಮಾವತಿ ಕೊಂ/ಗಣೇಶ್ ರವರ ಅಂಗಡಿ ಕಟ್ಟಡ ಮತ್ತು ಚಾಮುಂಡೇಶ್ವರಿ ದೇವಸ್ಥಾನ ದಿಂದ ಮುಂದಕ್ಕೆ ಸಾಗಿ ಮಂಜುಳ ಕೊಂ/ ನಾರಾಯಣ ರವರ ಮನೆ ತಲುಪಿ ತದನಂತರ ಬಲಕ್ಕೆ ತಿರುಗಿ ಚಿಕ್ಕಿ ಹೊಳೆ ಕಾಲುವೆ ಯಿಂದ ಉತ್ತಾರಾಭಿಮುಖವಾಗಿ ಸಾಗಿ ಶಾಂತಮ್ಮ ಕೊಂ/ನಾಗಚಾರಿ ಮತ್ತು ದೀಪ ಕೊಂ/ರಾಜೇಂದ್ರ ಮನೆಯನ್ನು ಒಳಗೊಂಡು ಗೊಂದಿಬಸವನಹಳ್ಳಿ ಮುಖ್ಯ ರಸ್ತೆಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗಿ ಚಂದ್ರಕಲಾ ಕೊಂ/ ಗಿರೀಶ್ ಮತ್ತು ಕೆ.ಸಿ.ಕಿರಣ್ ಕುಮಾರ್ ಬಿನ್/ಕೆ.ಪಿ.ಚಂಗಪ್ಪ ಕಟ್ಟಡ ಒಳಗೊಂಡು ಮುಂದೆ ಸಾಗಿ ಪಿ.ಪಿ.ಸತ್ಯನಾರಾಯಣ ಬಡಾವಣೆ, ಸಿದ್ದಯ್ಯ ಬಡಾವಣೆ ಒಳಗೊಂಡು ಎ.ಜಿ.ರೂಪ ಕೊಂ/ ಹರೀಶ್ ಎನ್.ಯು. ಮನೆಗೆ ತಲುಪಿ ತದನಂತರ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ ತದನಂತರ ದಕ್ಷಿಣಾಭಿಮುಖವಾಗಿ ಚಲಿಸಿ ಹೌಸಿಂಗ್ ಬೋರ್ಡ್ ಒಳಗೊಂಡು ಶ್ರೀಮತಿ.ಶಶಿಕಲಾ ಕೊಂ/ ರಾಮಚಂದ್ರ ಮೂರ್ತಿ ರವರ ಮನೆಗೆ ಬಂದು ತಲುಪುತ್ತದೆ.<br><br>**ಉತ್ತರ: ಗೊಂದಿಬಸವನಹಳ್ಳಿ ಮುಖ್ಯರಸ್ತೆ**<br>**ಪೂರ್ವ: ಕರ್ನಾಟಕ ಗೃಹಮಂಡಳಿ ರಸ್ತೆ**<br>**ಪಶ್ಚಿಮ: ಚಿಕ್ಕಿಹೊಳೆ ನಾಲೆ**<br>**ದಕ್ಷಿಣ: ನಂಜುಂಡೇಶ್ವರ ಬಡಾವಣೆಯ ಭಾಗಶ:, ಆರ್.ಸಿ.ಬಡಾವಣೆ ಭಾಗಶ: ಮತ್ತು ಗೊಂಧಿಬಸವನಹಳ್ಳಿ ರಸ್ತೆ,** |
| 22 | **ವಾರ್ಡ್ ಸಂಖ್ಯೆ –22**<br>1. ನಾಗೇಗೌಡ ಬಡಾವಣೆ<br>2. ಕಾಲಭೈರವೇಶ್ವರ ಬಡಾವಣೆ<br>3. ಅಣ್ಣೇಗೌಡ ಬಡಾವಣೆ<br>4. ಕರ್ನಾಟಕ ರಾಜ್ಯ ಅಗ್ನಿಶಾಮಕದಳ ಹಿಂಭಾಗ ಬರುವ ಮನೆಗಳು<br>5. ಮುಕಾಂಬಿಕಾ ವಿದ್ಯಾಸಂಸ್ಥೆ<br>6. ಎಸ್.ಎಲ್.ಎನ್ ಪ್ರಾಪರ್ಟಿಸ್<br>7. ಶ್ರೀ ಬಲಮುರಿ ಗಣಪತಿ ದೇವಸ್ಥಾನ ಸುತ್ತಮುತ್ತಲು ಪ್ರದೇಶ<br>8. ಬಸವೇಶ್ವರ ಬಡಾವಣೆ | ಕರ್ನಾಟಕ ರಾಜ್ಯ ಅಗ್ನಿಶಾಮಕದಳದಿಂದ ಪ್ರಾರಂಭವಾಗಿ. ದಕ್ಷಿಣಾಭಿಮುಖವಾಗಿ ಚಲಿಸುತ್ತಾ. ಮುಕಾಂಬಿಕಾ ಪ್ರೌಢಶಾಲೆ ಯನ್ನು ಮತ್ತು ಎಸ್.ಎಲ್.ಎನ್. ಸ್ವತ್ತುಗಳನ್ನು ಒಳಗೊಂಡು, ಗೋಪಾಲ್ ಸರ್ಕಲ್‌ಗೆ ಬಂದು ತಲುಪಿ ತದನಂತರ ಬಲಕ್ಕೆ ತಿರುಗಿ ದಕ್ಷಿಣಾಭಿಮುಖವಾಗಿ ಚಲಿಸಿ ಶ್ರೀ.ಮೀನಾಕ್ಷಿ ಕಾಂಪ್ಲೇಕ್ಸ್‌ನ್ನು ಒಳಗೊಂಡು ಗಡಿಯಾರ ಸರ್ಕಲ್‌ಗೆ ಬಂದು ತಲುಪುತ್ತದೆ. ತದನಂತರ ಬಲಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ ಬಲುಮುರಿದೇವಸ್ಥಾನ ಮತ್ತು ನಾಗೇಗೌಡ ಬಡಾವಣೆ ಕಾಲ ಬೈರವೇಶ್ವರ ಬಡಾವಣೆಗೆ ಒಳಗೊಂಡು ಚಿಕ್ಲಿಹೊಳೆ ಕಾಲುವೆ ತಲುಪಿ ತದನಂತರ ಬಲಕ್ಕೆ ತಿರುಗಿ ಉತ್ತಾರಾಭಿಮುಖವಾಗಿ ಚಲಿಸಿ ಶಾರದ ಕೊಂ/ ನಿಂಗ ರವರ ಮನೆಗಳನ್ನು ಒಳಗೊಂಡು ಪುರಸಭೆ ಗಡಿಗೆ ತಲುಪಿ ತದನಂತರ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಚಲಿಸಿ ಶ್ರೀದೇವಿಕೆರೆಯಮ್ಮ ದೇವಸ್ಥಾನ ಒಳಗೊಂಡು ಕರ್ನಾಟಕ ರಾಜ್ಯ ಅಗ್ನಿಶಾಮಕ ದಳ ಬಂದು ತಲುಪುತ್ತದೆ.<br><br>**ಉತ್ತರ : ಪುರಸಭೆ ಗಡಿ**<br>**ಪೂರ್ವ : ಹಾರಂಗಿ ಮುಖ್ಯ ರಸ್ತೆ**<br>**ಪಶ್ಚಿಮ : ಚಿಕ್ಕಿಹೊಳೆ ಕಾಲುವೆ ರಸ್ತೆ**<br>**ದಕ್ಷಿಣ : ಗೊಂದಿಬಸವನಹಳ್ಳಿ ಮುಖ್ಯ ರಸ್ತೆ** |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| 23 | **ವಾರ್ಡ್ ಸಂಖ್ಯೆ 23**<br>1. ಗೊಂದಿಬಸವನಹಳ್ಳಿ ಭಾಗಶ: | ಕೆ.ಜ್ಯೋತಿ ಕೋಂ/ಕೆ.ನಂಜುಂಡ ರವರ ಮನೆಮುಂದೆ ಇರುವ ಚಿಕ್ಲಿಹೊಳೆ ರಸ್ತೆಯಿಂದ ಗೊಂದಿಬಸವನಹಳ್ಳಿ ಸ.ನಂ.36/2 ರಿಂದ ಪ್ರಾರಂಭವಾಗಿ ಉತ್ತರಾಭಿಮುಖವಾಗಿ ಕಾಲುವೆಯಿಂದ ಸಾಗಿ ಶೃತಿ ಕೋಂ/ಯೊಗೇಶ, ಕವಿತಾ ಕೋಂ/ಸುರೇಶ.ಬಿ.ಡಿ ರವರ ಮನೆಯಿಂದ ಸಾಗಿ, ಗೊಂದಿಬಸವನಹಳ್ಳಿ ಮುಖ್ಯರಸ್ತೆಗೆ ಬಂದು ತಲುಪಿ, ತದನಂತರ ಚಿಕ್ಲಿಹೊಳೆ ಕಾಲುವೆಯಿಂದ ಸಾಗಿ ಗೊಂದಿಬಸವನಹಳ್ಳಿ ಮುಖ್ಯರಸ್ತೆಗೆ ಬಂದು ತಲುಪಿ, ತದನಂತರ ಚಿಕ್ಲಿಹೊಳೆ ಕಾಲುವೆಯಿಂದ ಮುಂದಕ್ಕೆ ಸಾಗಿ, ಮಂಜುನಾಥ ಬಿನ್/ಶ್ರೀನಿವಾಸ ಮತ್ತು ಚಾರ್ಲ್ಸ್‌ಮ್ಯಾಥ್ಯು.ಕೆ.ಜೆ. ಮನೆಯನ್ನು ಒಳಗೊಂಡು ಗೊಂದಿಬಸವನಹಳ್ಳಿ ಗಡಿಗೆ ಬಂದು ತಲುಪುತ್ತದೆ. ತದನಂತರ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸಿ, ಪಂಕಜಾಕ್ಷಿ ಮತ್ತು ಸುಧೀರ್ ಕುಮಾರ್ ಬಿನ್/ಗಂಗಾಧರ್ ಮತ್ತು ರಮೇಶ್ ಬಿನ್/ತಮ್ಮೇಗೌಡರ ಮನೆಯಿಂದ ಮುಂದಕ್ಕೆ ಸಾಗಿ ತನಿಯಪ್ಪ, ಸುಬ್ರಮಣ್ಯ ಮನೆಯನ್ನು ಒಳಗೊಂಡು ಅಂಗನ ವಾಡಿಗೆ ಬಂದು ತಲುಪಿ ತದನಂತರ ದಕ್ಷಿಣಾಭಿಮುಖ ವಾಗಿ ಚಲಿಸಿ ಸ.ನಂ.1 ಮೀಸಲು ಅರಣ್ಯವನ್ನು ದಾಟಿಕೊಂಡು ಸುನೀರ್ ಬಿನ್/ಅಬ್ಬು ರವರ ಮನೆ ಮತ್ತು ಮಹಾದೇವಿ ಕೋಂ/ಲೋಕೇಶ್ ರವರ ಮನೆಯನ್ನು ಒಳಗೊಂಡು, ಸ.ನಂ 31/4 ಒಳಗೊಂಡು, ಮಾದಾಪಟ್ಟಣ ಸ.ನಂ.11/2ಕ್ಕೆ ಬಂದು ತಲುಪಿ ವಿಘ್ನೇಶ್ವರ ಬಡಾವಣೆ ಒಳಗೊಂಡು ದಕ್ಷಿಣಾಭಿಮುಖ ವಾಗಿ ಚಲಿಸಿ, ಸ.ನಂ. 39/2 ಕಡಂಗ ಒಳಗೊಂಡು, ತದನಂತರ ಉತ್ತರಾಭಿಮುಖವಾಗಿ ಚಲಿಸಿ, ಸ.ನಂ.14/1, 14/2 ಒಳಗೊಂಡು ಮಲ್ಲೇಶ ಬಿನ್/ಜವರೇಗೌಡರ ಮನೆ ಒಳಗೊಂಡು ತದನಂತರ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗಿ ಕೆ.ಜ್ಯೋತಿ ಕೋಂ/ಕೆ.ನಂಜುಂಡ ರವರ ಮನೆಮುಂದೆ ಇರುವ ಗೊಂಧಿಬಸವನಹಳ್ಳಿಗೆ ಹೋಗುವ ರಸ್ತೆಗೆ ಬಂದು ತಲುಪುತ್ತದೆ.<br><br>**ಉತ್ತರ : ಪುರಸಭೆ ಗಡಿ**<br>**ಪೂರ್ವ: ಚಿಕ್ಲಿಹೊಳೆ ಕಾಲುವೆ ರಸ್ತೆ**<br>**ಪಶ್ಚಿಮ : ಪುರಸಭೆ ಗಡಿ**<br>**ದಕ್ಷಿಣ : ಗೊಂದಿಬಸವನಹಳ್ಳಿಗೆ ಹೋಗುವ ರಸ್ತೆ** |

**ಜಿಲ್ಲಾಧಿಕಾರಿ**
**ಕೊಡಗು ಜಿಲ್ಲೆ, ಮಡಿಕೇರಿ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು.

VIJAY
NELAMANGALA
MUNIDALAPPA